ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 20–12–2014

**ಪತ್ರಿಕಾ ಆಮಂತ್ರಣ**

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | **"Conclave on Convergence- Initiatives of Labour Department with Builders" organised by Department of Labour Presided: Dr. D.S. Vishwanath, Labour Commissioner,** | **22-12-2014 Monday at 10.00 A.M.** | **The Ballroom,-1, The Chancery Pavilion, No. 135, Residency Road, Bangalore** |
| 2 | ಪತ್ರಿಕಾಗೋಷ್ಠಿ:<br><br>ಶ್ರೀಮತಿ ಎಂ. ಕಮಲಾಕ್ಷಿ ರಾಜಣ್ಣ ಅಧ್ಯಕ್ಷರು ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ(ನಿ) ಲಾಲ್ ಬಾಗ್ | 22–12–2014 ಸೋಮವಾರ ಮಧ್ಯಾಹ್ನ 1–00 ಗಂಟೆಗೆ | ಕಿರು ಸಭಾಂಗಣ, ತೋಟಗಾರಿಕೆ ನಿರ್ದೇಶನಾಲಯ ಲಾಲ್‌ಬಾಗ್, ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮ ನಿಯಮಿತದ ಸುವರ್ಣ ಮಹೋತ್ಸವ

**ಬೆಂಗಳೂರು:ಡಿಸೆಂಬರ್:20:(ಕರ್ನಾಟಕ ವಾರ್ತೆ):–**

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ತನ್ನ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದ್ದು, ಇದೇ 23 ರಂದು ಸಮಾರಂಭವನ್ನು ಸೆಂಟ್ರಲ್ ಕಾಲೇಜ್ ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ನಿಗಮದ ಅಧ್ಯಕ್ಷ ಡಾ: ಬಿ. ಗುರಪ್ಪ ನಾಯ್ಡು ತಿಳಿಸಿದರು.

ಈ ಸಂಬಂಧ ಇಂದು ಹಮ್ಮಿಕೊಳ್ಳಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಈ ವಿಷಯ ತಿಳಿಸಿದರು. ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ, ಮೂಲ ಸೌಲಭ್ಯ ಅಭಿವೃದ್ಧಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಚಿವ ಶ್ರೀ ಆರ್. ರೋಷನ್ ಬೇಗ್, ಆಹಾರ ಸಚಿವ ಶ್ರೀ ದಿನೇಶ್ ಗುಂಡೂರಾವ್, ಸಾರಿಗೆ ಸಚಿವ ಶ್ರೀ ರಾಮಲಿಂಗಾರೆಡ್ಡಿ, ಗೃಹ ಸಚಿವ ಶ್ರೀ ಕೆ.ಜೆ. ಜಾರ್ಜ್ ಕೃಷಿ ಸಚಿವ ಶ್ರೀ ಕೃಷ್ಣ ಭೈರೇಗೌಡ ಹಾಗೂ ಇತರ ಗಣ್ಯರು ಪಾಲ್ಗೊಳ್ಳುವರು.

ರಾಜ್ಯಾದ್ಯಂತ 175 ಕೈಗಾರಿಕಾ ಎಸ್ಟೇಟ್‌ಗಳ ಸ್ಥಾಪನೆ, 6193 ಮಳಿಗೆಗಳ ನಿರ್ಮಾಣ 7640 ಕೈಗಾರಿಕಾ ನಿವೇಶನಗಳ ಅಭಿವೃದ್ಧಿ ಗ್ರಾಮೀಣ ಪ್ರದೇಶಗಳಲ್ಲಿ 809 ವಿಶ್ವ ಮಳಿಗೆಗಳ ನಿರ್ಮಾಣ, 17 ಕಚ್ಚ ಸಾಮಗ್ರಿ ಗೋದಾಮುಗಳ ಮೂಲಕ ಕಬ್ಬಿಣ ಮತ್ತು ಉಕ್ಕು, ಕಲ್ಲಿದ್ದಲು ಸಿಮೆಂಟ್, ಮೇಣ ಇತ್ಯಾದಿಗಳ ಸರಬರಾಜು, 6 ಲಕ್ಷ ಉದ್ಯೋಗಗಳ ಸೃಷ್ಠಿ ಮುಂತಾದವುಗಳನ್ನು ನಿಗಮವು ಕಳೆದ 50 ವರ್ಷಗಳಲ್ಲಿ ಸಾಧಿಸಿದೆ ಎಂದರು.

ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲ್ಲೂಕಿನ ಬೋರ್‌ಗಾವ್ ಗ್ರಾಮದಲ್ಲಿ 75 ಎಕರೆ ಪ್ರದೇಶದಲ್ಲಿ ಜವಳಿ ಪಾರ್ಕ್ ಮಂಗೂರು ಗ್ರಾಮದಲ್ಲಿ 14 ಎಕರೆ ಪ್ರದೇಶದಲ್ಲಿ ಬೆಳ್ಳಿ ಆಭರಣ ಪಾರ್ಕ್, ಚಿತ್ರದುರ್ಗ ಜಿಲ್ಲೆ ಚಳ್ಳಕೆರೆಯ ಉಳ್ಳಾರ್ತಿಕಾವಲ್‌ನಲ್ಲಿ ಸುಮಾರು 250 ಎಕರೆ ಪ್ರದೇಶದಲ್ಲಿ ಸುಸಜ್ಜಿತ ಕೈಗಾರಿಕಾ ಎಸ್ಟೇಟ್, ಖುದಾಪುರದಲ್ಲಿ 50 ಎಕರೆ ಪ್ರದೇಶದಲ್ಲಿ ಅತ್ಯಾಧುನಿಕ ಕೈಗಾರಿಕಾ ಎಸ್ಟೇಟ್, ರಾಜ್ಯಾದ್ಯಂತ ವಿವಿಧ 28 ಪ್ರದೇಶಗಳಲ್ಲಿನ ಸುಮಾರು 2275 ಎಕರೆ ಜಮೀನಿನಲ್ಲಿ ಹೊಸ ಕೈಗಾರಿಕಾ ಎಸ್ಟೇಟ್ ಸ್ಥಾಪಿಸುವ ಗುರಿ, 1495 ಕೈಗಾರಿಕಾ ನಿವೇಶನವನ್ನು ಹಂಚಿಕೆ ರಾಜ್ಯದ ಪ್ರಮುಖ 30 ಕೈಗಾರಿಕಾ ನಿವೇಶನಗಳ ಹಂಚಿಕೆ, ರಾಜ್ಯದ ಪ್ರಮುಖ 30 ಕೈಗಾರಿಕಾ ಎಸ್ಟೇಟ್‌ಗಳಲ್ಲಿ ಕೈಗಾರಿಕಾ ಮತ್ತು ವಾಣಿಜ್ಯ ಸಂಕೀರ್ಣ/ ಬಹುಮಹಡಿ ಕಟ್ಟಡಗಳ ನಿರ್ಮಾಣ ಇವರು ನಿಗಮದ ಉದ್ದೇಶಿತ ಯೋಜನೆಗಳು ಎಂದು ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ರಾಮರೆಡ್ಡಿ 2014–19 ರ ಕೈಗಾರಿಕಾ ನೀತಿ ಸ್ಥಾಪನೆಗೊಂಡಿದ್ದು, ಹೂಡಿಕೆ, ಸಬ್ಸಿಡಿ, ವಿದ್ಯುಚ್ಛಕ್ತಿ, ತೆರಿಗೆ ಮುಂತಾದರುಗಳ ಕ್ರಿಯಾ ಯೋಜನೆಯನ್ನು ಸಹ ಸಮಾರಂಭದಲ್ಲಿ ಬಿಡುಗಡೆ ಮಾಡಲಾಗುವುದು. ಕೆ.ಐ.ಎ.ಡಿ.ಬಿ. ಯಲ್ಲಿನ ಜಮೀನಿನ ಶೇ. 20 ರಷ್ಟನ್ನು ಸಣ್ಣ ಕೈಗಾರಿಕೆಗಳಿಗೆ ಮೀಸಲಿಡಲು ಕೋರಲಾಗುವುದೆಂದರು.

## ಡಿ.ಇಡಿ ಪರೀಕ್ಷೆ

**ಬೆಂಗಳೂರು :ಡಿಸೆಂಬರ್:20:(ಕರ್ನಾಟಕ ವಾರ್ತೆ):–**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ಇತರೆ ಪರೀಕ್ಷೆಗಳು) ವತಿಯಿಂದ ಡಿಸೆಂಬರ್ –2014ರ ಮಾಹೆಯಲ್ಲಿ ಪ್ರಥಮ ಮತ್ತು ದ್ವಿತೀಯ ಡಿ.ಇಡಿ ಪೂರಕ ಪರೀಕ್ಷೆಯನ್ನು ದಿನಾಂಕ 24–12–2014 ರಿಂದ 31–12–2014 ರವರೆಗೆ ನಡೆಸಲಾಗುತ್ತಿದೆ. ಸಂಬಂಧಿಸಿದ ಪ್ರವೇಶಪತ್ರಗಳನ್ನು ಎಲ್ಲಾ ಡಿ.ಇಡಿ ಸಂಸ್ಥೆಗಳಿಗೆ ಡಯಟ್ ಮೂಖಾಂತರ ಕಳುಹಿಸಲಾಗಿದೆ. ವಿದ್ಯಾರ್ಥಿಗಳು ಸಂಬಂಧಿಸಿದ ಸಂಸ್ಥೆಗಳಿಂದ ಪ್ರವೇಶ ಪತ್ರಗಳನ್ನು ಪಡೆದುಕೊಳ್ಳಲು ಪ್ರಕಟಣೆ ತಿಳಿಸಿದೆ.

# ರಸ್ತೆ ಸುರಕ್ಷಿತ ಸಪ್ತಾಹ

**ಬೆಂಗಳೂರು :ಡಿಸೆಂಬರ್:20:(ಕರ್ನಾಟಕ ವಾರ್ತೆ):–**

ಕೇಂದ್ರ ಸರ್ಕಾರವು 26 ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹವನ್ನು 11–1–2015 ರಿಂದ 17–1–2015 ರವರೆಗೆ **"Safety is not just a slogan, It's a way of life"** ಎಂಬ ಧ್ಯೇಯದೊಡನೆ ಆಚರಿಸಲು ತಿಳಿಸಲಾಗಿದೆ. ಕೇಂದ್ರ ಸರ್ಕಾರವು ನೀಡಿರುವ ಸೂಚನೆಯಂತೆ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳ ವ್ಯಾಪ್ತಿಯಲ್ಲಿ ರಸ್ತೆ ಸುರಕ್ಷತಾ ಜಾಗೃತಿ ಕಾರ್ಯಕ್ರಮಗಳನ್ನು ಸದರಿ ಅವಧಿಯಲ್ಲಿ ಹಮ್ಮಿಕೊಳ್ಳುವ ಮೂಲಕ ರಸ್ತೆ ಸುರಕ್ಷತಾ ಸಪ್ತಾಹ ಆಚರಿಸಲು ತಿಳಿಸಲಾಗಿದೆ.

ಆದ್ದರಿಂದ ಎಲ್ಲಾ ವಾಹನ ಮಾಲೀಕರು/ಚಾಲಕರು ವಾಹನಗಳನ್ನು ಸುಸ್ಥಿತಿಯಲ್ಲಿಟುಕೊಳ್ಳುವಂತೆ ಮತ್ತು ಮೇಲ್ಕಂಡ ಅವಧಿಯಲ್ಲಿ 26 ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹವನ್ನು **"Safety is not just a slogan, It's a way of life** ಎಂಬ ಧ್ಯೇಯ ವಾಕ್ಯದೊಡನೆ ಇದನ್ನು ಯಶಸ್ವಿಯಾಗಿ ಆಚರಣೆ ಮಾಡಲು ಅಗತ್ಯ ಸಹಕಾರ ನೀಡುವಂತೆ ಸಾರಿಗೆ ಇಲಾಖೆಯ ಪ್ರಕಟಣೆ ತಿಳಿಸಿದೆ.

## KARNATAKA COUNCIL FOR TECHNOLOGICAL UPGRADATION

Bangalore, December 20(Karnataka Information)

Karnataka Council for Technological Upgradation is established in the year 1996 and it is a Joint venture of Government of India and Government of Karnataka. The objectives of Karnataka Council for Technological Upgradation is implementing of Industrial Development Schemes such as Enhancement of competitiveness status of MSEs, Adoption of new technology & Upgradation and Quality improvement as per Karnataka Industrial Policy.

KCTU implements the GoI and GoK financial assisted Cluster Development Scheme to set-up Common Facility Centres for adoption of modern technology to improve the quality and enhance the Global competitiveness.

Karnataka Council for Technological Upgradation under Karnataka Industrial Policy 2009-14 has sanctioned incentive of Rs. 893,500/- to 15 Industrial Units obtained ISO Certification.

The 3rd and 4th State Level Committee has sanctioned Financial Assistance to R&D Centres estimated to cost Rs.3.26 Crores to 10 Engineering & Technology Colleges for Research & Development activity says a press note issued by Anil A Uppin Managing Director Karnataka Council for Technological Upgradation.

## ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್

ಬೆಂಗಳೂರು, ಡಿ. ೨೦ (ಕರ್ನಾಟಕ ವಾರ್ತೆ)–

ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್ 1996ರಲ್ಲಿ ಸ್ಥಾಪನೆಯಾಗಿದ್ದು, ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಒಂದು ಜಂಟಿ ಸಂಸ್ಥೆಯಾಗಿದೆ. ಈ ಸಂಸ್ಥೆಯ ಧ್ಯೇಯೋದ್ದೇಶಗಳಾದ ಸೂಕ್ಷ್ಮ ಮತ್ತು ಸಣ್ಣ ಉದ್ದಿಮೆಗಳಿಗೆ ಸ್ಪರ್ಧಾತ್ಮಕತೆ ವೃದ್ಧಿ, ಆಧುನಿಕ ತಂತ್ರಜ್ಞಾನ ಅಳವಡಿಕೆ, ಉನ್ನತೀಕರಣ, ವೈವಿಧ್ಯೀಕರಣ, ಉತ್ಪನ್ನಗಳ ಗುಣಮಟ್ಟ ಸುಧಾರಣೆ ಇತ್ಯಾದಿಗಳಾಗಿದ್ದು ಇದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದ ಹಲವು ಕೈಗಾರಿಕಾಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಭಾರತ ಸರ್ಕಾರದ ಕ್ಲಷ್ಟರ್ ಅಭಿವೃದ್ಧಿ ಯೋಜನೆ ಇತ್ಯಾದಿಗಳನ್ನು ಅನುಷ್ಠಾನಗೊಳಿಸುತ್ತಿದೆ.

ಅದರಂತೆ, ಕರ್ನಾಟಕ ಕೈಗಾರಿಕಾ ನೀತಿ 2009–14 ಅಡಿಯಲ್ಲಿ ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್, 10ನೇ ರಾಜ್ಯಮಟ್ಟದ ಮಂಜೂರಾತಿ ಸಮಿತಿ ಸಭೆಯಲ್ಲಿ ಮಂಜೂರಾದ 15 ಐಎಸ್‌ಓ ದೃಢೀಕರಣ ಪತ್ರ ಪಡೆದ ಘಟಕಗಳಿಗೆ ರೂ.8.93,500/–ಗಳ ಪ್ರೋತ್ಸಾಹಧನ ಬಿಡುಗಡೆ ಮಾಡಿರುತ್ತದೆ ಮತ್ತು 2013–14ನೇ ಸಾಲಿನಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳಿಗೆ ಆರ್ಥಿಕ ನೆರವು ನೀಡುವ ಯೋಜನೆಯಡಿ (ಶೇ.50 ರಷ್ಟು ಗರಿಷ್ಠ ರೂ.50 ಲಕ್ಷಗಳು) 3ನೇ ಮತ್ತು 4ನೇ ರಾಜ್ಯ ಮಟ್ಟದ ಸಮಿತಿ ಸಭೆಯಲ್ಲಿ 10 ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳಿಗೆ ರೂ.3.26 ಕೋಟಿ ಅನುದಾನವಾಗಿ ಬಿಡುಗಡೆ ಮಾಡಿರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕ ಶ್ರೀ ಅನಿಲ್ ಅ ಉಪ್ಪಿನ್ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.